



# ಗಂಗಾನದಿಯ ಮಹಾತ್ಮೆ

ಕಥೆ : ಕೆ. ಅಳಗರಾಜ ಮೂಲ : 'ರ್‍ಯಾಂಬಲ್ಸ್ ಇನ್ ವೇದಾಂತ್' ಚಿತ್ರ: ಕೋವಿ




4
ಆ ಆರ್ತನಾದವನ್ನು ಕೇಳಿ, ಏನಾಯಿತೆಂದು ವಿಚಾರಿಸಲು ಹಲವು ಮಂದಿ ಅವರ ಸುತ್ತ ಗುಂಪುಗಟ್ಟಿದರು.
ನಿನಗೆ ಏನು ಸಹಾಯ ಬೇಕು, ನಮಗೆ ಹೇಳು.
ಹೇಗೆ ಹೇಳಲಿ, ತಾಯಿ! ಇಲ್ಲಿ ಶವವಾಗಿ ಬಿದ್ದಿರುವವನು ನನ್ನ ಗಂಡ. ಅವನು ತನ್ನ ಕೊನೆಯ ದಿನಗಳನ್ನು ಗಂಗಾತೀರದಲ್ಲಿ ಕಳೆಯಲು ಇಚ್ಛಿಸಿದ್ದನು. ಹಾಗಾಗಿ, ಬಹಳ ದೂರದಿಂದ ನಾವು ಬಂದಿದ್ದೇವೆ. ಇಲ್ಲಿ ಈಗ ಹೀಗಾಯಿತು.
ಎಲ್ಲವೂ ವಿಧಿಲಿಖಿತ. ನೀನು ಬಹಳ ಅಸಹಾಯಕಳಾಗಿ ಕಾಣುತ್ತೀಯೆ. ನಿನಗೆ ಏನು ಸಹಾಯ ಬೇಕಾದರೂ ನಾವು ಒದಗಿಸುತ್ತೇವೆ. ನಮ್ಮನ್ನು ಕೇಳು.
5
ಈಗ ಅಂತ್ಯಸಂಸ್ಕಾರಗಳನ್ನು ನೆರವೇರಿಸಬೇಕಾಗಿದೆ. ಯಾರು ನನಗೆ ಸಹಾಯ ಮಾಡಲು ಮುಂದೆ ಬಂದಾರು, ತಾಯೇ!
ಇಲ್ಲಿ ಸಹಾಯ ಮಾಡುವ ಜನರಿಗೇನೂ ಕೊರತೆ ಇಲ್ಲ. ನಾವಿಲ್ಲಿ ಇಷ್ಟೊಂದು ಮಂದಿ ಇದ್ದೇವೆ, ಚಿಂತಿಸಬೇಡ.
6
ಆ ವಿಧವೆಯನ್ನು ಹಲವು ರೀತಿಯಿಂದ ಸುಲಿಗೆ ಮಾಡಬಹುದೆಂಬ ಆಸೆಯಿಂದ ಹಲವು ಮಂದಿ ಅವಳ ಸಹಾಯಕ್ಕೆ ಮುಂದೆ ಬಂದರು. ಕೆಲವರಿಗೆ ಅವಳ ಆಭರಣಗಳ ಮೇಲೂ ದೃಷ್ಟಿ ಬಿದ್ದಿತ್ತು.
ಮಗಳೇ, ನಿನಗೇನು ಬೇಕು, ನನಗೆ ಹೇಳು. ನಾನದನ್ನು ತಕ್ಷಣವೇ ಒದಗಿಸಿಕೊಡುತ್ತೇನೆ.
ನಾನಿಲ್ಲಿದ್ದೇನೆ, ನನಗೆ ಹೇಳು.
ವ್ಯಥಾ ಮಾತುಗಳೇಕೆ? ನಾನು ನಿನ್ನ ಪತಿಯನ್ನು ನನ್ನ ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಅಂತ್ಯ ಸಂಸ್ಕಾರಗಳನ್ನು ಮಾಡಿಬಿಡುತ್ತೇನೆ.
ನಿಮಗೆಲ್ಲರಿಗೂ ನನ್ನ ಕೃತಜ್ಞತೆಗಳು. ಆದರೆ ಒಂದು ಷರತ್ತಿದೆ. ನಿಮ್ಮಲ್ಲಿ ಯಾರು ದೇಹ ಮತ್ತು ಮನಸ್ಸುಗಳಿಂದ ಪವಿತ್ರರಾಗಿರುವಿರೋ, ಅವರು ಮಾತ್ರ ಈ ಅಂತ್ಯಸಂಸ್ಕಾರ ಮಾಡಲು ಅರ್ಹರು.


7 ಈ ಮಾತುಗಳನ್ನು ಕೇಳಿದೊಡನೆ, ಆ ನಾರಿಯ ಸೌಂದರ್ಯದಿಂದ ಆಕರ್ಷಿತರಾಗಿ ಮುಂದೆ ಬಂದ ಹಲವರು ನಿಶ್ಚೇಷ್ಟಿತರಾದರು. ಅವಳ ಒಡವೆಗಳ ಮೇಲೆ ಕಣ್ಣಿಟ್ಟಿದ್ದ ಕೆಲವರು ಅಲ್ಲಿಂದ ಕಾಲು ಕಿತ್ತರು. ಉಳಿದ ಕೆಲವರು ತಮ್ಮ ದೈಹಿಕ ಮಾನಸಿಕ ಶೌಚದ ಬಗ್ಗೆ ಅನುಮಾನವಿದ್ದವರು ಹಿಂದೆ ಮುಂದೆ ನೋಡತೊಡಗಿದರು.
ಈ ದೊಡ್ಡ ಗುಂಪಿನಲ್ಲಿ ಪವಿತ್ರ ಮನಸ್ಸಿನವರು ಒಬ್ಬರೂ ಇಲ್ಲವೆ? ನನ್ನ ಪತಿಯ ಅಂತ್ಯ ಸಂಸ್ಕಾರಗಳನ್ನು ಮಾಡಲು ನನಗಾರೂ ಸಿಗಲಾರರೆ?
ಒಂದೇ ಒಂದು ಪಾಪಕೃತ್ಯವನ್ನೂ ಮಾಡದ ವ್ಯಕ್ತಿ ಇರಲು ಸಾಧ್ಯವೆ? ಎಂತಹ ಮೂರ್ಖ ಷರತ್ತು? ಹೀಗೆ ಎಣಿಸಿ ಜನರ ಗುಂಪು ಕರಗತೊಡಗಿತು. ಉಳಿದ ಮಂದಿ ಈ ಅಭಾಗ್ಯೆಗೆ ಯಾವುದೇ ಸಹಾಯ ಮಾಡಲು ಸಾಧ್ಯವಾಗುತ್ತಿಲ್ಲವಲ್ಲ ಎಂದು ಮರುಗಿದರು. ಅಷ್ಟರಲ್ಲಿ ಒಬ್ಬ ತರುಣನು ಅಲ್ಲಿ ಪ್ರತ್ಯಕ್ಷನಾದನು.
8 ತಂಗಿ, ನಾನು ನಿನ್ನ ಸಮಸ್ಯೆಯನ್ನು ಪರಿಹರಿಸುತ್ತೇನೆ.
ಸೋದರ, ನಿನಗೆ ನನ್ನ ಷರತ್ತು ತಿಳಿದಿದೆಯಲ್ಲ! ಕೇವಲ ಹೃದಯ ಶುದ್ಧಿ ಇರುವವನು ಮಾತ್ರ ನನ್ನ ಪತಿಯ ಅಂತ್ಯಸಂಸ್ಕಾರವನ್ನು ಮಾಡಬಹುದು.
ಹೌದು ತಂಗಿ, ನನಗೆ ತಿಳಿದಿದೆ.ನೀನು ಸ್ವಲ್ಪ ಹೊತ್ತು ಕಾಯಬೇಕಾಗಬಹುದು.
9 ಅವನು ಗಂಗಾನದಿಯಲ್ಲಿ ಶೀಘ್ರವಾಗಿ ಒಂದು ಮುಳುಗು ಹಾಕಿ ಮೇಲೆದ್ದು ಬಂದನು.
ನಾನೀಗ ನಿನ್ನ ಗಂಡನ ಅಂತ್ಯಸಂಸ್ಕಾರವನ್ನು ಮಾಡಲು ಸಿದ್ಧನಾಗಿ ಬಂದಿದ್ದೇನೆ.
ಎಲೋ ಹುಡುಗ, ನಿನ್ನನ್ನು ನಂಬಲು ನಾವೇನು ಮೂರ್ಖರೆ? ನೀನು ಹೃದಯಶುದ್ಧಿಯವನೆಂದು ಹೇಗೆ ನಂಬುವುದು? ನೀನು ಯಾರನ್ನು ಮೋಸಗೊಳಿಸಲು ಯತ್ನಿಸುತ್ತಿದ್ದೀಯಾ?




12

ಕೆಲವರ ಶ್ರದ್ಧೆ 'ಅಂಧಶ್ರದ್ಧೆ' ಎಂದು ಟೀಕಿಸಿದ ಶಿಷ್ಯನೊಬ್ಬನಿಗೆ ಶ್ರೀರಾಮಕೃಷ್ಣರು ಹೀಗೆ ಉತ್ತರಿಸಿದರು: ''ಒಳ್ಳೆಯದು, ಈ 'ಅಂಧಶ್ರದ್ಧೆ' ಎಂದರೆ ಏನೆಂದು ನೀನು ನನಗೆ ವಿವರಿಸಿ ಹೇಳಬಲ್ಲೆಯಾ? ಶ್ರದ್ಧೆಯು ಸಂಪೂರ್ಣವಾಗಿ ಕುರುಡು, ಅಲ್ಲವೆ? ಹಾಗಾದರೆ ಅದರ ಕಣ್ಣುಗಳು ಯಾವುವು? ಒಂದೋ ಶ್ರದ್ಧೆ ಅಥವಾ ಜ್ಞಾನ ಎಂದು ಹೇಳು. ಇಲ್ಲವಾದರೆ ಕೆಲವರಲ್ಲಿ ಶ್ರದ್ಧೆ ಕುರುಡಾಗಿದ್ದು ಕೆಲವರಲ್ಲಿ 'ಕಾಣುವಂತೆ' ಇದೆ ಎಂಬ ಈ ಹುಸಿನುಡಿ ಏಕೆ?''

